ಬಣ್ಣದ ಮನೆ ಬೇಕಿರಲಿಲ್ಲ. ನಿರ್ಮಲವಾದ ಪವಿತ್ರವಾದ ಬಿಳಿಬಣ್ಣದ ಮನೆ ಬೇಕಿತ್ತು.)

ಜುಡಾಸ್ ಪ್ರತಿಮೆಗಳು ಮಾರ್ಕೆಟ್ ಚೌಕದಲ್ಲಿ ಸಿಡಿದು ಪುಡಿಪುಡಿಯಾಗುತ್ತಿದ್ದಾಗ, ಪಟಾಕಿಗಳ ಸಿಡಿತದ ಲಯಕ್ಕೆ ಹೊಂದಿಕೊಂಡಂತೆ, ನಾನು ತೋಳು ಬೀಸಿ ಬೀಸಿ ಬಿಳೀಬಣ್ಣ ಹಚ್ಚುತ್ತಿದ್ದೆ. ನನ್ನ ಮನೆಯ ಪ್ರಕಾಶಮಾನ ನೀಲಿ ಬಣ್ಣವು ನಿಧಾನವಾಗಿ ಮಸುಕಾಗತೊಡಗಿತು. ಅದು ಕ್ರಮೇಣ ಮೃದುವಾದ, ಪಾರದರ್ಶಕವಾದ ನೀಲಿಯಾಯಿತು. ನಾನು ಹೆಚ್ಚುಕಡಿಮೆ ಒಂದು ಗೋಡೆಯಿಡೀ ಬಣ್ಣ ಹೊಡೆದು ಮುಗಿಸಿದ್ದಾಗ, ಇದ್ದಕ್ಕಿದ್ದಂತೆ ಡೈನಮೈಟಿನ ಆಸ್ಫೋಟದಂತಹ ಶಬ್ದ ಕೇಳಿಸಿತು. ದೈತ್ಯಾಕಾರದ, ಗಗನಗಾಮಿಯಾದ ರಾಕೆಟ್ ಅನ್ನು ಉಡ್ಡಯನ ಮಾಡಿದಾಗ ಕೇಳಿಸುವ ಶಬ್ದ.

ಕಾಯುವಿಕೆಯ ಬಿಗಿ ಎದೆಬಡಿತ– ಸುತ್ತಲಿನ ಗಾಳಿಯಲ್ಲಿ ಏನೋ ಮೌನ, ಏನೋ ನಿರೀಕ್ಷೆ. ಆಮೇಲೆ ಅವರು ಏದುಸಿರು ಬಿಡುತ್ತಾ ಓಡಿಬಂದು ನನಗೆ ಸುದ್ದಿ ತಿಳಿಸಿದರು.

ಅವನು ಎಲ್ಲರಿಗಿಂತ ದೊಡ್ಡ ಜುಡಾಸ್ ಆಗಿದ್ದ. ನಿಜವಾದ ಜುಡಾಸ್‌ಗೆ ಅವನೇ ಸರಿಸಾಟಿ. ನಾನು ಮಾರ್ಕೆಟ್ಟಿಗೆ ಹೋದಾಗ ಅಲ್ಲಿ ಯಾರೂ ನರ್ತಿಸುತ್ತಿರಲಿಲ್ಲ. ಮುಖವಾಡಗಳು ತಮ್ಮ ಅ–ಮಾನುಷವಾದ ಕಣ್ಣುಗಳಿಂದ ಇಡೀ ದೃಶ್ಯವನ್ನು ವೀಕ್ಷಿಸುತ್ತಿದ್ದವು. ನೀರುಹಂಚುವ ಮನುಷ್ಯ ಅಲ್ಲಿ ಬಿದ್ದಿದ್ದ, ಸುಟ್ಟು ಕರಕಲಾಗಿ, ಕಾರಂಜಿಯ ಮೇಲುಭಾಗಕ್ಕೆ ಸಿಕ್ಕಿಕೊಂಡು ನೇತಾಡುತ್ತ.

(ಅವನ ಪ್ಯಾಂಟಿನ ಗುಂಡಿಗಳ ನಡುವೆ ಒಂದು ಡೈನಮೈಟ್ ಸಿಕ್ಕಿಕೊಂಡಿತ್ತು, ಅಥವಾ ಅವನ ಹೊಕ್ಕುಳಿನಲ್ಲಿ ಮುಷ್ಟಿಯಷ್ಟು ಚೆರಿಬಾಂಬುಗಳಿದ್ದವು.)

ಇಷ್ಟಂತೂ ನಿಜ: ಫ್ಯೂಸಿಗೆ ಬೆಂಕಿ ಹಚ್ಚಿದವನು ನಾನಲ್ಲ. ನನ್ನ ಹೇಳಿಕೆಯನ್ನು ಎಚ್ಚರಿಕೆಯಿಂದ ಓದಿದರೆ, ಈ ವಿಷಯ ನಿಮಗೂ ಖಚಿತವಾಗುತ್ತದೆ.

ಅವನ ಮುಖ – ಅದು ವಿಚಿತ್ರವಾಗಿತ್ತು – ಅವನ ಮುಖವು ಪಾರದರ್ಶಕವಾದ ಮೃದು–ನೀಲಿಯಾಗಿತ್ತು, ಅಂಗೈ ಮೇಲಾಗಿ ಬಿದ್ದಿದ್ದ ಕೈ ಕೂಡಾ ಅದೇ ಬಣ್ಣ. ಅವನ ಒಂದು ತೊರಡುಬೀಜ ಕೂಡಾ ಅದೇ ಬಣ್ಣ ತಳೆದಿರುತ್ತದೆ ಎಂದು ನಾನು ಪ್ರಮಾಣ ಮಾಡಿ ಹೇಳಬಲ್ಲೆ. ಆದರೆ, ಅವನ ಆಸ್ಫೋಟನೆಯಾದಾಗ ಅದು ಸೊಂಟದಿಂದ ಕಿತ್ತುಹೋಗಿ ಎಲ್ಲೋ ಬಿದ್ದಿತ್ತು. ಎಷ್ಟು ಹುಡುಕಿದರೂ ಅದು ಸಿಗಲಿಲ್ಲ. (ಮಾರ್ಕೆಟ್ ಚೌಕದ ಮಧ್ಯದಲ್ಲಿ, ಮೇಜುಬಟ್ಟೆ ಹೊದಿಸಿದ್ದ ಕೆಲವೇ ಕೆಲವು ಮೇಜುಗಳಲ್ಲಿ ಕುಳಿತು ನಿಧಾನವಾಗಿ ಸಭ್ಯವಾಗಿ ಪಾನೀಯ ಗುಟಕರಿಸುತ್ತ, ತಮ್ಮ ಕಸೂತಿ ಹಾಕಿದ ಉಡುಪನ್ನೋ ಉದ್ದನೆಯ ಗೌನನ್ನೋ ಪ್ರದರ್ಶನ ಮಾಡುತ್ತಾ ಜನಸಮುದಾಯದ ಕುಣಿತದ ವೇಗವನ್ನು ಕಡಿಮೆ ಮಾಡುತ್ತಿದ್ದ, ಬೆಟ್ಟದ ಮೇಲಿನ ಬಂಗಲೆಗಳ ಶ್ರೀಮಂತರ ಉಡುಪುಗಳ ಮೇಲೆ ಅವನ ಕರುಳಿನ ಚೂರುಪಾರು ಬಿದ್ದು ಗಲೀಜು ಮಾಡಿತ್ತು. ಎಲ್ಲೋ ಸ್ವಲ್ಪ ಬಿತ್ತು ಅಷ್ಟೆ. ಆದರೆ, ಅವರು ತಕ್ಷಣವೇ ಎದ್ದುನಿಂತರು. ಇನ್ನಿಲ್ಲದಷ್ಟು ಅಸಹ್ಯಪಟ್ಟರು. ತಮ್ಮ ಪ್ರೀತಿಯ ಪುಟ್ಟ ಮಕ್ಕಳು ಆ ದುರ್ವಿಧಿಯ ದೃಶ್ಯವನ್ನು ನೋಡದಂತೆ ಅವರನ್ನು ಕರೆದುಕೊಂಡು ಹೊರಟುಹೋದರು.)

ಇನ್ನೊಂದೆಡೆ, ನಾನು ಪವಾಡವಾಗುವುದೆಂದು ಕಾದು ಕುಳಿತೆ: ಈ ಜೂಡಾಸ್‌ನ ಛಿದ್ರ ಹೊಟ್ಟೆಯಿಂದ ನೀರು ಅನಂತವಾಗಿ ಹರಿಯುವುದೆಂದು.

ಆದರೆ ಊರಿನ ಜನರ ನಿರೀಕ್ಷೆಗಳು ಚಿಕ್ಕವು. ಧ್ವಂಸಗೊಂಡ ಹೊಟ್ಟೆಯಿಂದ ರಕ್ತ ಹರಿಯಿತು. ಅದರಿಂದ ಯಾರಿಗೂ ಆಶ್ಚರ್ಯವಾಗಲಿಲ್ಲ ಮತ್ತು ಅನೇಕರಿಗೆ ಸಂತೋಷವೇ ಆಯಿತು. ಮುಖವಾಡಗಳನ್ನು ಹಾಕಿಕೊಂಡವರು, ತಮ್ಮ ಬಿಳಿಯ ಕೈಗವಸಿನ ಬೆರಳುಗಳನ್ನು ರಕ್ತದಲ್ಲಿ ಅದ್ದಿದರು ಮತ್ತು ಅದನ್ನು ತಮ್ಮ ಮುಖ ಮುಚ್ಚಿದ್ದ ಬಿಳಿಯ–ಮನುಷ್ಯರ, ಬಿಳಿಯ ಮುಖವಾಡಗಳಿಗೆ ಹಚ್ಚಿದರು.

ನೀರುಮನುಷ್ಯನ ರಕ್ತ, ಅದು ನೀರಿನ ಸಂಕೇತ, ಪರಿಪೂರ್ಣ ಶುದ್ಧೀಕರಣದ ಸ್ನಾನ.

ಆಮೇಲೆ, ಅವರು ನನ್ನನ್ನು ಊರಿನ ಬೀದಿಗಳಲ್ಲಿ ಮೆರವಣಿಗೆ ಮಾಡಬಯಸಿದರು. ಅವರು ನನ್ನನ್ನು ಪ್ರೀತಿಸುತ್ತಿದ್ದರು, ದ್ವೇಷಿಸುತ್ತಿದ್ದರು, ನನ್ನ ಹೆಸರನ್ನು ಗಟ್ಟಿಯಾಗಿ ಕೂಗಿದರು. ಮತ್ತು ಅಲ್ಲಿ ಆ ನೀಲಿ ನೀರುಮನುಷ್ಯ ತನ್ನದೇ ರಕ್ತದಿಂದ ಕೆಂಪಗಾಗುತ್ತಿರುವಾಗ, ಇಲ್ಲಿ ನಾನು, ಎಂದಿನ ಹಾಗೆ ಬೆಲೆಯಿಲ್ಲದವನು, ಎಲ್ಲರೂ ಕೈಬಿಟ್ಟವನಂತಾಗಿದ್ದೆ ಮತ್ತು ಈಗಲಂತೂ ಅವನ ಬಣ್ಣವೂ ನನಗೆ ಸೇರಿದ್ದಲ್ಲ.

●